ಹೊಸ ಕೊಳವೆ ನೀರು ಸರಬರಾಜು ಯೋಜನೆಗಳು

1	2	1	2
49)	ತೀರ್ಥಹಳ್ಳಿ	50)	ಬಿರೂರು 3ನೇ ಹಂತ
51)	ಹಾನಗಲ್	52)	ಗುರಮಿತ್ಕಲ್
53)	ಸೇಡಂ	54)	ಚಿತ್ತಾಪುರ
55)	ಶಹಪುರ		

ಮಂಡಲಿ ನೀರು ಸರಬರಾಜು ಯೋಜನೆಗಳು

1)	ಗದಗ್ ಬೆಟಗೇರಿ	2)	ಗುಲ್ಬರ್ಗಾ 3 ನೇ ಹಂತ
3)	ಬಳ್ಳಾರಿ	4)	ಮಂಗಳೂರು ಎಂ.ಸಿ.ಎಫ್. 2ನೇ ಹಂತ
5)	ಮಂಗಳೂರು ಎಂ.ಸಿ.ಎಫ್. 1ನೇ ಹಂತ	6)	ಬೆಳಗಾಂ 2ನೇ ಹಂತ

ನಗರ ನೀರು ಸರಬರಾಜು ಯೋಜನೆಗಳು

1)	ಹುಬ್ಬಳ್ಳಿ–ಧಾರವಾಡ ಅವಳಿ ನಗರಗಳಲ್ಲಿ ಜಲಸಂಗ್ರಹಾರಗಳನ್ನು ನಿರ್ಮಿಸುವುದು ಹಾಗೂ ವಿಸ್ತರಣಾ ಜಾಲವನ್ನು ಹಾಕುವುದು	2)	ಸಾಗರ
		3)	ನರಗುಂದ
		4)	ದಾಂಡೇಲಿ
5)	ಹುಕ್ಕೇರಿ ಸಂಕೇಶ್ವರ	6)	ಚಿಕ್ಕೋಡಿ
7)	ಇಲಕಲ್	8)	ಹೊಸಪೇಟೆ
9)	ಶಹಾಬಾದ್	10)	ಯಾದಗಿರಿ

ವಿಷಯ :– ವೈದ್ಯಕೀಯ ಹಾಗೂ ತಾಂತ್ರಿಕ ಸೀಟುಗಳನ್ನು ಕನ್ನಡೇತರರಿಂದ ದುರಪಯೋಗ.

ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ 607 (1297)

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ (ಸಂಕೇಶ್ವರ) :– ಮಾನ್ಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕರ್ನಾಟಕ ರಾಜ್ಯದಲ್ಲಿ ಕನ್ನಡಿಗರೆಂದು ಹೇಳಿ ಕನ್ನಡೇತರರು ವೈದ್ಯಕೀಯ ಹಾಗೂ ತಾಂತ್ರಿಕ ಸೀಟುಗಳನ್ನು ತೆಗೆದುಕೊಂಡಿರುವವರ ಹೆಸರುಗಳೇನು ?

ಆ) ದುರುಪಯೋಗ ಪಡೆದುಕೊಂಡಿರುವ ವೈದ್ಯಕೀಯ ಹಾಗೂ ತಾಂತ್ರಿಕ ಸೀಟಿನ ವಿದ್ಯಾರ್ಥಿಗಳಿಗೆ ಮುಂದುವರಿಸಿದ್ದಕ್ಕೆ ಕಾರಣವೇನು ?

ಇ) ದುರುಪಯೋಗ ಮಾಡಿರುವ ವೈದ್ಯಕೀಯ ಹಾಗೂ ತಾಂತ್ರಿಕ ಸೀಟಿನ ಸಂಬಂಧಿಸಿದವರಿಗೆ ಕಾನೂನಿನ ಚೌಕಟ್ಟಿನಲ್ಲಿ ಸರ್ಕಾರದಿಂದ ತೆಗೆದುಕೊಳ್ಳಬಹುದಾದ ಕ್ರಮವೇನು ?

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಮಂತ್ರಿಗಳು) :–

ಅ) ಇಂತಹ ಯಾವ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ವಿಷಯ :– ಜೂನಿಯರ್ ಕಾಂಪ್ಲೋಜಿಟ್ ಕಾಲೇಜುಗಳಿಗೆ ಸರ್ಕಾರದಿಂದ ಅನುದಾನ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 608 (1296)

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ (ಸಂಕೇಶ್ವರ) :– ಮಾನ್ಯ ಶಿಕ್ಷಣ ಮತ್ತು ಸಂಸದೀಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿ ಐದು ವರ್ಷ ಮೇಲ್ಪಟ್ಟು ನಡೆಸಿಕೊಂಡು ಬಂದಿರುವ ಜೂನಿಯರ್ ಕಾಂಪ್ಲೋಜಿಟ್ ಕಾಲೇಜುಗಳ ಹೆಸರುಗಳೇನು ?